# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಕೆಎಸ್‌ಕ್ಯುಎಎಸಿ, ಮಲ್ಲೇಶ್ವರಂ, ಬೆಂಗಳೂರು–560003.

## KARNATAKA SCHOOL EXAMINATION AND ASSESSMENT BOARD

KSQAAC, Malleshwaram, Bengaluru–560003.

## ಮೌಲ್ಯಾಂಕನ – ಮಾರ್ಚ್ 2023 – ಮಾದರಿ ಪ್ರಶ್ನೋತ್ತರ ಪತ್ರಿಕೆ

## Assessment - March 2023 Model Paper

**ತರಗತಿ : 5** | **ವಿಷಯ : ಪ್ರಥಮ ಭಾಷೆ ಕನ್ನಡ** | **ಅಂಕಗಳು : 40**, **ಸಮಯ : 2 ಗಂಟೆ**

**ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ**

ವಿದ್ಯಾರ್ಥಿಯ ಹೆಸರು : ____________________

ವಿದ್ಯಾರ್ಥಿಯ SATS ಸಂಖ್ಯೆ : ☐☐☐☐☐☐☐☐☐ ವಿದ್ಯಾರ್ಥಿಯ ಸಹಿ : ____________

**ಕೊಠಡಿ ಮೇಲ್ವಿಚಾರಕರು ಭರ್ತಿ ಮಾಡಬೇಕಾಗಿರುವ ಮಾಹಿತಿ**

ಶಾಲೆಯ ಡೈಸ್ ಕೋಡ್ : ☐☐☐☐☐☐☐☐☐☐☐

ಶಾಲೆಯ ಹೆಸರು : ____________________

ಕ್ಲಸ್ಟರ್ : ____________ ಬ್ಲಾಕ್ : ____________ ಜಿಲ್ಲೆ : ____________

ಶಾಲೆಯ ವಿಧ : ಸರ್ಕಾರಿ ☐ ಅನುದಾನಿತ ☐ ಅನುದಾನ ರಹಿತ ☐

(ಅನ್ವಯಿಸುವ ಮಾಹಿತಿಗೆ "✓" ಗುರುತು ಹಾಕಿರಿ)

ಕೊಠಡಿ ಮೇಲ್ವಿಚಾರಕರ ಸಹಿ : ____________

**ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ**

| ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು |
|---|---|---|---|---|---|
| 1 | | 11 | | 21 | |
| 2 | | 12 | | 22 | |
| 3 | | 13 | | 23 | |
| 4 | | 14 | | 24 | |
| 5 | | 15 | | 25 | |
| 6 | | 16 | | 26 | |
| 7 | | 17 | | 27 | |
| 8 | | 18 | | 28 | |
| **9** | | 19 | | – | |
| **10** | | 20 | | – | |
| ಒಟ್ಟು ಅಂಕಗಳು | | ಒಟ್ಟು ಅಂಕಗಳು | | ಒಟ್ಟು ಅಂಕಗಳು | |
| | | | | ಒಟ್ಟು ಗಳಿಸಿದ ಅಂಕ | |

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) ____________________

ಮೌಲ್ಯಮಾಪಕರ ಸಹಿ : ____________

I 1 ರಿಂದ 20 ರವರೆಗಿನ ಪ್ರಶ್ನೆಗಳಿಗೆ ನೀಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ನಿಗದಿ ಪಡಿಸಿರುವ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. **20x1=20**

1. ಗಿಳಿ <u>ಹಣ್ಣು ಹಂಪಲುಗಳನ್ನು</u> ನಾಶಪಡಿಸಿದೆ.
ಮೇಲಿನ ವಾಕ್ಯದಲ್ಲಿ ಅಡಿಗೆರೆ ಎಳೆದ ಪದದಲ್ಲಿರುವ ವಿಭಕ್ತಿ ಪ್ರತ್ಯಯ,

A) ಅನ್ನು B) ಇಂದ
C) ಉ D) ಅ

ಉತ್ತರ : ☐ ________________

2. ಮರಗಳಿಂದ ನಮಗೆ ಆಗುವ ಉಪಯೋಗಗಳಾವುವು
ಈ ವಾಕ್ಯದ ಕೊನೆಯಲ್ಲಿ ಬಳಸಬಹುದಾದ ಸೂಕ್ತ ಲೇಖನ ಚಿಹ್ನೆ,

A) . B) !
C) ; D) ?

ಉತ್ತರ : ☐ ________________

3. ನಾಡಿನ ಹೆಮ್ಮೆಯು ಗಂಗ ಮನೆತನ ರಾಷ್ಟ್ರಕೂಟ ಹೊಯ್ಸಳ ಹಿರಿಮೆ
ವಿಜಯನಗರ ಸಿರಿ ಕೆಳದಿಯ ವೈಭವ ಕನ್ನಡ ಮಾತೆಯ ನಿಜಗರಿಮೆ
ಹೊಯ್ಸಳ ಪತನದ ನಂತರ ಬೆಳೆಯಿತು ವಿಜಯನಗರವತಿ ಶೀಘ್ರದಲಿ
ಲೋಕವೆ ಬೆರಗಾಗುವ ಸಿರಿಸಂಪದ ಮರೆಯಿತು ಈ ಸಾಮ್ರಾಜ್ಯದಲಿ

ಮೇಲ್ಕಂಡ ಪದ್ಯದಲ್ಲಿ ವಿಜಯನಗರ ಸಾಮ್ರಾಜ್ಯ ಉದಯವಾದದ್ದು

A) ಗಂಗ ಮನೆತನದ ನಂತರ B) ರಾಷ್ಟ್ರಕೂಟ ಮನೆತನದ ನಂತರ
C) ಹೊಯ್ಸಳ ಮನೆತನದ ನಂತರ D) ಕೆಳದಿ ಮನೆತನದ ನಂತರ

ಉತ್ತರ : ☐ ____________________________

4. ಸುಗ್ಗಿಯ ಹಬ್ಬ ಸಂಕ್ರಾಂತಿ ಹಿಗ್ಗನು ತರುತಲಿ
ರೈತರ ಪ್ರಗತಿಗೆ ಹಾದಿ ಮೂಡಿಸಲಿ.
ಉತ್ತಮ ಮಳೆಬೆಳೆಯಿಂದ ನಾಡದು ಹಸಿರಾಗಲಿ
ದವಸ ಧಾನ್ಯಗಳು ಸುಭಿಕ್ಷವಾಗಲಿ. ಮನೆಗಳಲಿ.

ಈ ಪದ್ಯಕ್ಕೆ ನೀಡಬಹುದಾದ ಸೂಕ್ತ ಶಿರೋನಾಮೆ

A) ಸಂಕ್ರಾಂತಿ ಹಬ್ಬ B) ನವರಾತ್ರಿ ಹಬ್ಬ
C) ಶಿವರಾತ್ರಿ ಹಬ್ಬ D) ಯುಗಾದಿ ಹಬ್ಬ

ಉತ್ತರ : ☐ ________________

5. ಮೋನಿಷ ತನ್ನ ತಮ್ಮನಾದ ತರುಣನಿಗೆ ಪತ್ರ ಬರೆಯುವಾಗ ಬಳಸಬಹುದಾದ ಸಂಬೋಧನೆ.

A) ಆತ್ಮೀಯ, ಪ್ರೀತಿಯ
B) ಚಿರಂಜೀವಿ
C) ಪೂಜ್ಯ
D) ತೀರ್ಥರೂಪು ಸಮಾನ

ಉತ್ತರ : ☐ ________________

6. ನೀನು ಶಾಲೆಗೆ ಬರುವಾಗ ರಸ್ತೆಯಲ್ಲಿ ಅಪಘಾತವಾಗಿರುವುದನ್ನು ನೋಡುತ್ತೀಯೆ. ಆಗ ನಿನ್ನಲ್ಲಿ ಉಂಟಾಗುವ ಭಾವನೆ,

A) ಆನಂದ
B) ಕೋಪ
C) ಭಯ
D) ಉತ್ಸಾಹ

ಉತ್ತರ : ☐ ________________

7. ಸೇನಾನಿ ಮಹಾದಂಡನಾಯಕ ಜನರಲ್ ಜಿ.ಜಿ. ಬೇವೂರರು ದಿನಾಂಕ ೧೧.೦೮.೧೯೮೬ರಂದು ಜನಿಸಿದರು. ಈ ವಾಕ್ಯದಲ್ಲಿರುವ 'ದಂಡ' ಪದದ ನಾನಾರ್ಥಕ ಪದಗಳು.

A) ಶಿಕ್ಷೆ, ಕೋಲು, ಸೈನ್ಯ
B) ಕೋಲು, ಭಾಗ, ದಂಡ
C) ಸೈನ್ಯ, ಗುಂಪು, ಎಲೆ
D) ಶಿಕ್ಷೆ, ಭಾಗ, ಗುಂಪು

ಉತ್ತರ : ☐ ________________

8. ಈ ಸೂಚನಾ ಫಲಕಕ್ಕೆ ಸರಿಹೊಂದುವ ಸೂಚನೆ.



A) ಪಾದಚಾರಿ ಮಾರ್ಗ
B) ಬಲರಸ್ತೆಗೆ ತಿರುಗುವುದನ್ನು ನಿಷೇಧಿಸಿದೆ
C) ರಸ್ತೆಯಲ್ಲಿ ಉಬ್ಬು ತಗ್ಗುಗಳಿವೆ
D) ರೈಲ್ವೆ ಹಳಿ ಇದೆ

ಉತ್ತರ : ☐ ________________

9. ಸಂಗೊಳ್ಳಿ ರಾಯಣ್ಣನು ಬ್ರಿಟೀಷರಿಗೆ ಚಳ್ಳೇಹಣ್ಣು ತಿನ್ನಿಸಿ ನುಣುಚಿಕೊಳ್ಳುವುದರಲ್ಲಿ ನಿಪುಣನಾಗಿದ್ದ.

ಈ ವಾಕ್ಯದಲ್ಲಿ ಚಳ್ಳೇಹಣ್ಣು ತಿನ್ನಿಸು ಪದವು ನೀಡುವ ಸಮಾನಾರ್ಥ

A) ತಪ್ಪಿಸಿಕೊ B) ಹಣ್ಣು ತಿನ್ನು

C) ಓಡಿ ಹೋಗು D) ಮೋಸಗೊಳಿಸು

ಉತ್ತರ : ☐ ________________

10. ಮಕ್ಕಳು ಶಾಲೆ ಆರಂಭವಾಗುವುದನ್ನು ಕಾಯುತ್ತಿದ್ದಾರೆ. ಈ ವಾಕ್ಯದಲ್ಲಿರುವ 'ಆರಂಭವಾಗುವ' ಪದವನ್ನು ಬಿಡಿಸಿ ಬರೆದ ಸರಿಯಾದ ರೂಪ.

A) ಆರಂಭ + ವಗು B) ಆರಂಭ + ವಾಗು

C) ಆರಂಭ + ಹಾಗು D) ಆರಂಭ + ಆಗು

ಉತ್ತರ : ☐ ________________

11. ಕುಟಿಲವ ಬಿಡದಿಹ ಮನುಜರು ಮಂತ್ರವ
ಪಠನೆಯ ಮಾಡಿದರೇನು ಫಲ
ಸಟೆಯನ್ನಾಡುವ ಮನುಜರು ಸಂತತ
ನಟನೆಯ ಮಾಡಿದರೇನು ಫಲ

ಮೇಲಿನ ಪದ್ಯದಲ್ಲಿ ಹೇಳಿರುವ ಆಶಯ

A) ಮೋಸ ಮಾಡಬೇಕು ಸುಳ್ಳು ಹೇಳಬೇಕು.

B) ಮೋಸ, ವಂಚನೆ, ಸುಳ್ಳು, ನಟನೆ ಬಿಡಬೇಕು.

C) ನಟನೆ ಮಾಡಬೇಕು.

D) ಮಂತ್ರ ಪಠನೆ ಮಾಡಬಾರದು.

ಉತ್ತರ : ☐ ________________

**12. ಹಿರಿಯರ ಅನುಭವದ ಮಾತುಗಳನ್ನು ನಾವು ಕೇಳಬೇಕು.**

**ಈ ವಾಕ್ಯದಲ್ಲಿನ 'ಅನುಭವ' ಪದದ ವಿರುದ್ಧಾರ್ಥ ಪದ**

A) ಅನನುಭಾವ B) ಅನಾನುಭವ

C) ಅನನುಭವ D) ಅನಾನುಭಾವ

ಉತ್ತರ : ☐ ________________

**13. ವಿಸ್ಮಯ ನದಿಯಲ್ಲಿ ಈಜಿದಳು.**

**ಈ ವಾಕ್ಯದಲ್ಲಿ ಈಜಿದಳು ಪದವು,**

A) ನಾಮಪದ B) ಕ್ರಿಯಾಪದ

C) ಸರ್ವನಾಮ D) ವಿಶೇಷಣ

ಉತ್ತರ : ☐ ________________

**14. ಐತಿ ಜಾಗ ಒಳಗ ।**

**ಈ ವಾಕ್ಯದ ಗ್ರಾಂಥಿಕ ರೂಪ**

A) ಇದೆ ಜಾಗ ಒಳಗೆ. B) ಇಲ್ಲ ಜಾಗ ಒಳಗ.

C) ಒಳಗೆ ಜಾಗ ಇಲ್ಲ. D) ಇದೆ ಜಾಗ ಇಲ್ಲ.

ಉತ್ತರ : ☐ ________________

**15. ಮುಂದಿನ ಸಾಹಿತ್ಯ ಸಮ್ಮೇಳನ ಮಂಡ್ಯ ನಗರದಲ್ಲಿ ನಡೆಯುವುದು.**

**ಈ ವಾಕ್ಯದಲ್ಲಿರುವ ಭವಿಷ್ಯತ್ ಕಾಲ ಸೂಚಿಸುವ ಪದ**

A) ಸಾಹಿತ್ಯ B) ಸಮ್ಮೇಳನ

C) ನಗರದಲ್ಲಿ D) ನಡೆಯುವುದು

ಉತ್ತರ : ☐ ________________

16. 'ನಾನು' ಇಂದು ಸಿನೆಮಾ ನೋಡುತ್ತೇನೆ.

ಇಲ್ಲಿ 'ನಾನು' ಪದದ ಬಹುವಚನ ರೂಪ

A) ನಾವು  B) ನೀವು

C) ಅವರು  D) ಇವರು

ಉತ್ತರ : ☐ ________________

17. ಈ ಕೆಳಗಿನ ಚಿತ್ರ ಗಮನಿಸಿ ಘೋಷಣಾ ವಾಕ್ಯ ಪೂರ್ತಿಗೊಳಿಸಿ.




ರಕ್ತದಾನ ಮಾಡಿ ____________

A) ಪರಿಸರ ಉಳಿಸಿ

B) ಜೀವ ಉಳಿಸಿ

C) ನಾಡು ಉಳಿಸಿ

D) ಮರ ಉಳಿಸಿ

ಉತ್ತರ : ☐ ________________

18. ಈ ಕೆಳಗಿನ ಚಿತ್ರದಲ್ಲಿ ಮಕ್ಕಳು :



A) ಸಾಹಸ ಕಾರ್ಯದಲ್ಲಿ ತೊಡಗಿದ್ದಾರೆ.

B) ಸಾಹಸ ಮಾಡಲು ಚಿಂತಿಸುತ್ತಿದ್ದಾರೆ.

C) ಸಾಹಸ ಮಾಡುವುದು ಅಸಾಧ್ಯ.

D) ಸಾಹಸ ಮಾಡುವುದು ಸುಲಭ.

ಉತ್ತರ : ☐ ______________________

**19.** **ಹಸಿರು ತೋಟದಲ್ಲಿ ಬೆಳ್ಳಿ ಗೂಟ**

**ಈ ಒಗಟನ್ನು ಬಿಡಿಸಿದಾಗ,**

A) ಮಲ್ಲಿಗೆ B) ಮೂಲಂಗಿ

C) ಕ್ಯಾರೆಟ್ D) ಹುರುಳಿ

ಉತ್ತರ : ☐ ________________

**20.** **ಈ ಕೆಳಗಿನ ಚಿತ್ರಸರಣಿಯನ್ನು ಗಮನಿಸಿದಾಗ ಅರ್ಥವಾಗುವುದು**



A) ದ್ರಾಕ್ಷಿಯನ್ನು ತಿಂದು ಸಂತೋಷಗೊಂಡಿದೆ

B) ದ್ರಾಕ್ಷಿ ಸಿಗದೆ ನಿರಾಸೆಯಿಂದ ಹೋಗುತ್ತಿದೆ.

C) ದ್ರಾಕ್ಷಿಯನ್ನು ತನ್ನವರಿಗೆ ಕೊಂಡೊಯ್ಯುತ್ತಿದೆ.

D) ದ್ರಾಕ್ಷಿ ತೋಟ ನಿರ್ಮಿಸುತ್ತಿದೆ.

ಉತ್ತರ : ☐ ________________________

**II** **21 ರಿಂದ 28 ರವರೆಗೆ ಪ್ರಶ್ನೆಗಳಿಗೆ ನಿಗದಿಪಡಿಸಿರುವ ಸ್ಥಳದಲ್ಲಿ ಉತ್ತರಿಸುವುದು.**

**21.** **ಓಬವ್ವ ಕಿತ್ತೂರಿನ ಸಾಮಾನ್ಯ ಮಹಿಳೆ. ನೀರಿಗಾಗಿ ಹೋದಾಗ ಶತ್ರು ಸೈನಿಕರು ಕಿಂಡಿಯಲ್ಲಿ ನುಸುಳುತ್ತಿರುವುದನ್ನು ಕಂಡ ಓಬವ್ವ ತಕ್ಷಣವೇ ಮನೆಗೆ ಹೋಗಿ ಒನಕೆಯೊಂದನ್ನು ತಂದು ಕಿಂಡಿಯ ಬಾಗಿಲಲ್ಲಿ ನಿಂತಳು. ಸೈನಿಕರು ಒಬ್ಬೊಬ್ಬರೆ ಬರುತ್ತಿದ್ದಂತೆಯೇ ಒನಕೆಯಿಂದ ಬಡಿದು ಕೊಂದಳು.**

**ಮೇಲಿನ ಸಾಲುಗಳನ್ನು ಓದಿ ಓಬವ್ವನ ಸಾಹಸ ಕುರಿತು 2–3 ಸಾಲುಗಳಲ್ಲಿ ಟಿಪ್ಪಣೆ ಬರೆಯಿರಿ.** **2 ಅಂಕ**

________________________________________

________________________________________

________________________________________

________________________________________

22. ಕೆಳಗಿನ ಭಿತ್ತಿಚಿತ್ರವನ್ನು ಗಮನಿಸಿ ನೀನು ಕೈಗೊಳ್ಳುವ 2 ಮುನ್ನೆಚ್ಚರಿಕೆ ಕ್ರಮಗಳ ಕುರಿತು ಬರೆ. **2 ಅಂಕ**




______________________________

______________________________

______________________________

______________________________

23. ನಿಮಗೆ ಇಷ್ಟವಾದ ಆಟದ ಕುರಿತು ಮೂರು-ನಾಲ್ಕು ವಾಕ್ಯಗಳಲ್ಲಿ ಬರೆಯಿರಿ. **2 ಅಂಕ**

______________________________

______________________________

______________________________

______________________________

24. ಶಾಲೆಯ ಆಟದ ಸಮಯದಲ್ಲಿ ನಿಮಗೂ ಹಾಗೂ ನಿಮ್ಮ ಸ್ನೇಹಿತ / ಸ್ನೇಹಿತೆಯ ಮಧ್ಯೆ ನಡೆಯಬಹುದಾದ ಸಂಭಾಷಣೆಯನ್ನು ಊಹಿಸಿ ಬರೆಯಿರಿ. **2** ಅಂಕ

ನೀನು : ______________________________

ಸ್ನೇಹಿತ/ತೆ : ______________________________

ನೀನು : ______________________________

ಸ್ನೇಹಿತ/ತೆ : ______________________________

ನೀನು : ______________________________

ಸ್ನೇಹಿತ/ತೆ : ______________________________

25. ಹಾವಿನ ಹೆಡೆ ಚೆಂದ, ಮಾವಿನ ಮಿಡಿ ಚೆಂದ
ಹಾರಾಡಿ ಬರುವ ಗಿಳಿ ಚೆಂದ । ಕಂದಯ್ಯ
ನೀ ಚೆಂದ ನಮ್ಮ ಮನಿಗೆಲ್ಲ ॥

ಈ ಮೇಲಿನ ಪದ್ಯದಲ್ಲಿ ತಾಯಿ ಕಂದನನ್ನು ನೀ ಚೆಂದ ಎಂದು ಹೇಳುವಾಗ ಯಾವ-ಯಾವ ಹೋಲಿಕೆ ನೀಡಿದ್ದಾರೆ. ನಿಮ್ಮ ಮಾತುಗಳಲ್ಲಿ ವ್ಯಕ್ತಪಡಿಸಿ. **2** ಅಂಕ

______________________________

______________________________

______________________________

______________________________

26. ಒಮ್ಮೆ ನಾನು ರಸ್ತೆಯಲ್ಲಿ ನಡೆದು ಹೋಗುತ್ತಿದ್ದೆ. ವೇಗವಾಗಿ ಬಂದ ಕಾರೊಂದು ರಸ್ತೆ ದಾಟುತ್ತಿದ್ದ ವ್ಯಕ್ತಿಯೊಬ್ಬನಿಗೆ ಢಿಕ್ಕಿ ಹೊಡೆಯಿತು. ಢಿಕ್ಕಿಯ ರಭಸಕ್ಕೆ ಅವನು ರಸ್ತೆಪಕ್ಕದಲ್ಲಿ ಚೀರುತ್ತಾ ಬಿದ್ದನು ......

ಈ ಘಟನೆಯ ಮುಂದಿನ ಭಾಗವನ್ನು ಊಹಿಸಿ ಕನಿಷ್ಠ ಮೂರು ಅರ್ಥಪೂರ್ಣ ವಾಕ್ಯ ಬಳಸಿ ಘಟನೆಯನ್ನು ಪೂರ್ಣಗೊಳಿಸಿ. **3** ಅಂಕ

______________________________

______________________________

______________________________

______________________________

27. ನಮ್ಮ ದೇಶದ ಬಾವುಟ ಮೂರು ಬಣ್ಣಗಳಿಂದ ಕೂಡಿದೆ. 'ಕೇಸರಿ' ತ್ಯಾಗದ ಸಂಕೇತ, 'ಬಿಳಿ' ಶಾಂತಿಯ ಪ್ರತೀಕ ಮತ್ತು 'ಹಸಿರು' ಸಮೃದ್ಧಿಯ ಸೂಚಕ, ನಡುವೆ ಇರುವ ನೀಲಿ ಬಣ್ಣದ ಚಕ್ರ ಪ್ರಗತಿಯ ಸಂಕೇತ. ಇದುವೆ ನಮ್ಮ ಹೆಮ್ಮೆಯ ಬಾವುಟ. 'ಜನಗಣಮನ' ನಮ್ಮ ರಾಷ್ಟ್ರಗೀತೆ. ಈ ಗೀತೆಯನ್ನು ಬರೆದವರು ರವೀಂದ್ರನಾಥ ಠಾಗೂರ್. ಸಾರನಾಥದ ಸಿಂಹಬೋಧಿಗೆ ನಮ್ಮ ರಾಷ್ಟ್ರಲಾಂಛನವಾಗಿದೆ.

ಈ ಮೇಲಿನ ಗದ್ಯ ಓದಿ ನಮ್ಮ ಬಾವುಟ ನೀಡುವ ಸಂದೇಶವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ. **3 ಅಂಕ**

______________________________

______________________________

______________________________

______________________________

28. ಈ ಕೆಳಗಿನ ಚಿತ್ರವನ್ನು ಕುರಿತು ನಿಮ್ಮ ಅಭಿಪ್ರಾಯವನ್ನು ನಾಲ್ಕು–ಐದು ಸಾಲುಗಳಲ್ಲಿ ಬರೆಯಿರಿ. **4 ಅಂಕ**



______________________________

______________________________

______________________________

______________________________

______________________________